

ನಡೆಸಬೇಕು. ನನಗೆ ಪರ್ವತಾರೋಹಣ ಧೀರರ ಸಾಹಸಗಳಿಗಿಂತ, ಹೊಳೆಯನ್ನು ಅದರ ಹುಟ್ಟಿನ ಮೂಲದಿಂದ ಕಡಲಳಿವೆಯ ತನಕ ಶೋಧಿಸಿದವರ ಕಥನಗಳೇ ಹೆಚ್ಚು ರೋಚಕ. ಪರ್ವತಾರೋಹಣದಲ್ಲಿ ಇಲ್ಲದ ನೋಟವೈವಿಧ್ಯ ನದೀಯಾನದಲ್ಲಿವೆ.

ಪರ್ವತಗಳ ಮಹಾಕಾಯದ ಅಸಂಖ್ಯಾತ ತಾವುಗಳಿಂದ ನೀರಧಾರೆಗಳು ಉಕ್ಕುತ್ತವೆ. ಅವು ಕೆಳಗಿಳಿದು ಬಯಲಲ್ಲಿ ಪರಸ್ಪರ ಕೂಡಿ ವಿಶಾಲ ನದಿಯಾಗಿ ಮೈಪಡೆಯುತ್ತವೆ. ಸಾಗರವನ್ನು ಸೇರುವಾಗ ಮತ್ತೆ ಶಾಖೆಗಳಾಗಿ ಒಡೆಯಬಹುದು. ಈ ಕೂಡಿಕೆ-ಸೀಳಿಕೆಗಳ ನಡುವೆ, ಚೆಲ್ಲಿಬಿದ್ದ ಶಾಯಿಯಂತೆ ಜಲಾಶಯವಾಗಿ ಮಡುಗಟ್ಟಬಹುದು. ಆಗ ಅವುಗಳ ಆಕಾರ ಡ್ರ್ಯಾಗನಿನಂತೆ ಆಚುಕೋಚಾಗಿ ಬದಲುವುದು. ಬಾಗ್ದಾದ್-ಇಸ್ತಾಂಬುಲ್ ವಾಯುಪಥದಲ್ಲಿ ಝಗ್ರಾಸ್ ಬೆಟ್ಟಗುಡ್ಡಗಳ ನಡುವೆ ಇಂಥದೊಂದು ಸರೋವರವಿದೆ. ಗೋಧಿಬಣ್ಣದ ಮರುಭೂಮಿಯ ಮೇಲೆ ಬಿರುಗಾಳಿಗೆ ಕಳಚಿಬಿದ್ದಿರುವ ನೀಲಗಗನದ ಛತ್ತಿನಂತಿರುವ ಅದರ ಮೇಲೆ, ವಿಮಾನ ಬರೋಬರಿ ಅರ್ಧತಾಸು ಹಾರುತ್ತದೆ. ಅದರ ಮಾಯಾವಿ ಜಲವು, ಜಲಕೇಳಿಗೆ ಕೆಳಗಿಳಿಯುವಂತೆ ಸೆಳೆಯುತ್ತದೆ. ನಡುಏಷ್ಯಾದ ಮೇಲೆ ಎಲ್ಲೇ ಹಾರಲಿ, ಕರುಣೆಯ ಬಟ್ಟಲಾದ ನೀಲಗಡಲೂ, ಅದಕ್ಕೆ ಸಂಲಗ್ನಗೊಂಡಿರುವ ಶುಷ್ಕ ಮರಳುಗಾಡೂ, ಒಡನಾಡುವ ಸುರತದೃಶ್ಯಕ್ಕೆ ಸಾಕ್ಷಿಯಾಗಬಹುದು.

ನಿಸರ್ಗ ರಚಿಸಿದ ಭವ್ಯ ಕಲಾಕೃತಿಗಳಂತಿರುವ ಪಶ್ಚಿಮಘಟ್ಟಗಳ ಬಹುರೂಪಿ ಸೌಂದರ್ಯ